# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128/2019** **ಡಿ . ಡಬ್ಲ್ಯುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವಸ್ವಾಮಿ<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 08 –01 –2026. |

**<u>ಪಾಟೀ ಸವಾಲುಃ  ವಾದಿ ಪರ  ಶ್ರೀ ಸಿ ಎಲ್ ಬಿ   ವಕೀಲರಿಂದಃ</u>**

ನನ್ನ ಜಮೀನಿನಲ್ಲಿ  ಹಿಂದೆ ಬೇಸ್ ಮೆಂಟ್ ಇತ್ತು ಎಂದರೆ ಸರಿ. ಬೇಸ್ ಮೆಂಟ್ ಗೆ  ಸೇರಿದಂತೆ ತಂತಿ ಬೇಲಿಯನ್ನು  ಹಾಕಿಕೊಂಡಿರುತ್ತಾರೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 381/2015  ವಾದಿ ಮತ್ತು ಅವರ ಸಹೋದರ ರವರು ನಮ್ಮ  ವಿರುದ್ಧ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ.  ಸದರಿ ದಾವಾ ಸಂಖ್ಯೆ 381/2015 ರಾಜಿ ಆಗಿರುತ್ತದೆ ಎಂದರೆ ಸರಿ.  ತಂತಿ ಬೇಲಿ ಹಾಕಿದ ಪಕ್ಕದ ಜಾಗದಲ್ಲಿ ದಾರಿಯನ್ನು ಬಿಟ್ಟುಕೊಂಡಿದ್ದರು ಎಂದರೆ ಸರಿ. ನಮ್ಮ ಜಮೀನಿನ ಪೂರ್ವಕ್ಕೆ  ಬಂಡಿ ದಾರಿ ಇರುತ್ತದೆ ಎಂದರೆ ಸರಿ.  ಮತ್ತು  ವಾದಿಗಳು ಆ ಬಂಡಿ ದಾರಿಯ ಮೂಲಕವೇ ತಿರುಗಾಡುತ್ತಿದ್ದರು ಮತ್ತು ಈಗಲೂ ಸಹ ಬಂಡಿ ದಾರಿಯನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ.  ಸದರಿ ದಾವೆ ರಾಜಿ ಆದ ಬಳಿಕ ಮತ್ತು ಡಿಕ್ರಿ ಅದ ಬಳಿಕ ತಂತಿ ಬೇಲಿಯನ್ನು ಹಾಕಿರುತ್ತಾರೆ ಎಂದರೆ ಸರಿ.

ನಾನು ಅವರ ತಂತಿ ಬೇಲಿಗೆ ಸೇರಿದ ಜಾಗದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ  ಐದು ತೆಂಗಿನ ಗಿಡಗಳನ್ನು ಹಾಕಿರುತ್ತೇನೆ ಎಂದರೆ ಸರಿ.  ನಾನು ತೆಂಗಿನ ಗಿಡಗಳನ್ನು ತಂತಿ ಬೇಲಿಗೆ ಸೇರಿದ ಜಾಗಕ್ಕೆ  ಸೇರಿ  ಹಾಕಿರುತ್ತೇನೆ ಮತ್ತು ಬಿಡಬೇಕಾದ ಜಾಗವನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ.  ಜಾಗ ಬಿಡದೇ ಹಾಕಿರುವುದರಿಂದ ತೆಂಗಿನ ಗಿಡಗಳು ತೆಂಗಿನ ಮರಗಳು ಆದ ಬಳಿಕ  ತೊಂದರೆ ಆಗುತ್ತದೆ ಎಂದರೆ ಸರಿಯಲ್ಲ.  ತಂತಿ ಬೇಲಿ ಮತ್ತು ತಿರುಗಾಡಲು  ಅನಾನುಕೂಲ ಆಗುತ್ತದೆ ಎಂದರೆ ಸರಿಯಲ್ಲ.  ನಾನು

ತೊಂದರೆ ಕೊಡುವ ಉದ್ದೇಶದಿಂದ ತೆಂಗಿನ ಗಿಡಗಳನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ತೆಂಗಿನ ಗಿಡಗಳನ್ನು ನೀವು ಯಾಕೆ ಹಾಕಿರುವಿರಾ ಎಂಬ ಪ್ರಶ್ನೆಯನ್ನು ವಾದಿಗಳು ಕೇಳಿದಾಗ ನಾವು ಉಡಾಫೆ ಉತ್ತರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲೆ ಮಾಡಿರುತ್ತಾರೆ ಎಂದರೆ ಸರಿ ಮತ್ತು ಪೋಲೀಸರು ಬಂದಿದ್ದರು ಎಂದರೆ ಸರಿ. ಪೋಲೀಸರು ಬಂದ ಬಳಿಕ ಅವರು ನಮಗೆ ಗಿಡಗಳನ್ನು ಸ್ಥಳಾಂತರ ಮಾಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೋಲೀಸರು ನಮಗೆ ಗಿಡಗಳನ್ನು ಸ್ಥಳಾಂತರ ಮಾಡಿ ಎಂದು ಹೇಳಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪೋಲೀಸರು ಹೇಳಿದ ಮಾತನ್ನು ನಾವುಗಳು ಒಪ್ಪಿಕೊಂಡಿದ್ದರು ಸಹ ನಾವು ಗಿಡಗಳನ್ನು ಸ್ಥಳಾಂತರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತೆ ದಿಃ 20-03-2019 ರಂದು ಮತ್ತೆ ವಾದಿಯವರು ಭೇಟಿ ನೀಡಿ ಗಿಡಗಳನ್ನು ಸ್ಥಳಾಂತರ ಮಾಡಿ ಎಂದು ಕೇಳಿಕೊಂಡಿದ್ದಾಗ ನಾವು ಮತ್ತೆ ಉಡಾಫೆ ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಅನ್ಯ ಮಾರ್ಗ ವಿಲ್ಲದ ಸದರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಸದರಿ ಜಾಗದಲ್ಲಿ ಎಷ್ಟು ಗಿಡಗಳು ಇವೆ ಎಂಬ ಪ್ರಶ್ನೆಗೆ ಸಾಕ್ಷಿಯು ಮೂರು ಗಿಡಗಳು ಇವೆ ಎಂದು ನುಡಿಯುತ್ತಾರೆ. ಮತ್ತು ಜಾಗ ಬಿಡದೇ ಇರುವ ಕಾರಣದಿಂದ ವಾದಿಯವರಿಗೆ ತೊಂದರೆ ಆಗುತ್ತಿದೆ ಮತ್ತು ನೀವು ಅದನ್ನು ತೆಗಿಯಬೇಕು ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮತ್ತು ನಾವು ಬಿಡಬೇಕಾದ ಜಾಗವನ್ನು ಬಿಡದೇ ಅಕ್ರಮವಾಗಿ ಗಿಡಗಳನ್ನು ಹಾಕಿರುತ್ತೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**